## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC No.486/2023**
**CW: 01 P W : 01**

### ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 28.01.2026

| | |
|---|---|
| ಹೆಸರು | : ಶಿವಾಜಿ ಗುಳೆದ |
| ತಂದೆಯ ಹೆಸರು | : ಮಲ್ಲಪ್ಪ ಗುಳೆದ |
| ವಯಸ್ಸು | : 59 |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಶಹಾಬಾದ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 2 ಮತ್ತು 3 ಇವರ ಪರಿಚಯ ನನಗೆ ಇರುವುದಿಲ್ಲ. ಈ ಹಂತದಲ್ಲಿ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಜಪ್ತು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ- 1 (ಎ) ಎಂದು ಗುರತಿಲಾಯಿತು. ನಿಪಿ-1 ರ ಮೇಲೆ ಯಾವ ದಿನಾಂಕ ಹಾಗೂ ಸಮಯದಂದು ಸಹಿ ಹಾಕಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ.

ನಿಪಿ-1 ರ ಮೇಲೆ ನಾನು ಯಾವ ಕಾರಣಕ್ಕೆ ಸಹಿ ಹಾಕಿರುತ್ತೆನೆ ಹೇಳಲು ಬರುವುದಿಲ್ಲ. ಈ ದಾಖಲೆಯ ಮೇಲೆ ಸಹಿನುನ ಅಬಕಾರಿ ಅಧಿಕಾರಿಗಳು ಹೇಳಿರುವುದಿಂದ ಮಾಡಿರುತ್ತೇನೆ. ಪೋಲೀಸರು ನನ್ನ ಹಾಗೂ ಚಾಸಾ-2 ಇವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 08/03/2023 ರಂದು ನನ್ನ ಹಾಗೂ ಚಾಸಾ-2 ಇವರ ಸಮಕ್ಷಮ ಚಾಸಾ-3 ರವರು ಸಾಯಂಕಾಲ 7.30 ರಿಂದ 8.30 ರವರೆಗೆ ನಿ.ಪಿ.1 ರಂತೆ ಶಹಾಬಾದ ಸ್ಟೇಷನ್ ತಾಂಡಾದ ಮನೆಯೊಂದರಲ್ಲಿ ಪಂಚನಾಮೆಯನ್ನು ಜರುಗಿಸಿ ಸುಮಾರು 2 ಲೀಟರಿನ ಸಾಮರ್ಥ್ಯದ ಒಂದು ಪ್ಲಾಸ್ಟಿಕ ಬಾಟಲಿಯಲ್ಲಿ ಕಳ್ಳಭಟ್ಟಿ ಸರಾಯಿ, ಒಂದು ಪ್ಲಾಸ್ಟಿಕ ಕೊಡದಲ್ಲಿ ಅಂದಾಜು 10 ಲೀಟರ ಬೆಲ್ಲದ ಕೊಳೆ ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಿ.ಪಿ.1 ರ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮನೆಯು

ಆರೋಪಿತನಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಪಂಚನಾಮೆ ವಿಷಯವನ್ನು ನನಗೆ ಪೋಲೀಸರು ಮೊದಲೇ ತಿಳಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯಗೊಳಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : **ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**